## ಹಲ್ಲಿಗೆ ಸರ!

ನನ್ನ ತಮ್ಮನ ಮಗ ನಾಲ್ಕು ವರ್ಷದ ಸನಂದನ್ ತುಂಬಾ ಚುರುಕು. ಒಮ್ಮೆ ರಜೆಗೆಂದು ಅವರಮ್ಮನ ಜೊತೆ ಅಜ್ಜಿ ಮನೆಗೆ ಹೋಗಿ ಬಂದ. ನಮಗೆಲ್ಲಾ ಅಲ್ಲಿನ ಸುದ್ದಿ ಬಿತ್ತರಿಸುತ್ತಿದ್ದ. ಮಾತಿನ ನಡುವೆ 'ದೀಪ್ತಿ ಅಕ್ಕ ಇದ್ದಾಳಲ್ಲ, ಅವಳು ಹಲ್ಲಿಗೆ ಸರ ಹಾಕ್ಕೊಂಡಿದ್ದಾಳೆ' ಎಂದ. ನಮಗೆ ಅರ್ಥವಾಗಲಿಲ್ಲ. ಆಗ ಅವನಮ್ಮ, 'ದೀಪ್ತಿಗೆ ಸ್ವಲ್ಪ ಉಬ್ಬು ಹಲ್ಲಿತ್ತಲ್ಲ, ಅದಕ್ಕೆ ಬ್ರೇಸಸ್ ಹಾಕಿಸಿಕೊಂಡಿದ್ದಾಳೆ. ಈತ ಅದನ್ನೇ ಹೇಳ್ತಿರೋದು' ಎಂದು ವಿವರಿಸಿದಾಗಲೇ ನಮಗದು ಅರ್ಥವಾಗಿದ್ದು!

**ಡಾ. ರೇವತಿ ಅಗ್ನಿಹೋತ್ರಿ**



## '...ತಡೀರಿ ಫ್ಯಾನ್ ಹಾಕ್ತೀನಿ'

ನಾವು ಹೊಸದುರ್ಗದಲ್ಲಿದ್ದು, ನಮ್ಮ ಮಗಳು–ಅಳಿಯ ಬೆಂಗಳೂರಿನಲ್ಲಿ ಇರುವುದರಿಂದ ಆಗಾಗ ನಾವು ಮಗಳನ್ನು ನೋಡಲು, ಮಾತಾಡಲು ವಿಡಿಯೊ ಕಾಲ್ ಮಾಡುತ್ತೇವೆ. ಆ ಭಾನುವಾರ ವಿಡಿಯೊ ಕಾಲ್‌ನಲ್ಲಿ ಮಾತಾಡುವಾಗ ನನ್ನ ಪತ್ನಿ ಗೀತಾ ಬೆವರುತ್ತಿದ್ದಳು. 'ಇಲ್ಲಿ ಬಿಸಿಲು ಬಹಳ ಇದೆ. ವಿದ್ಯುತ್ ಸಮಸ್ಯೆ ಬೇರೆ, ಫ್ಯಾನಿಲ್ಲ ಏನೂ ಇಲ್ಲ. ಸೆಕೆ ತಡೆಯೋಕೆ ಆಗ್ತಿಲ್ಲ' ಎಂದು ಗೀತಾ ಮಗಳೆದುರು ಹೇಳುತ್ತಿದ್ದಳು. ಅಲ್ಲಿಯೇ ವಿಡಿಯೊ ಕಾಲ್ ನೋಡುತ್ತ ನಿಂತಿದ್ದ ಮಗಳ ಓರಗಿತ್ತಿಯ ಪುಟಾಣಿ ಮಗ ಮೊಬೈಲ್‌ನಲ್ಲಿ ಇಣುಕಿ, 'ತಡೀರಿ, ಫ್ಯಾನ್ ಹಾಕ್ತೀನಿ, ಸೆಕೆ ಕಡಿಮೆ ಆಗುತ್ತೆ' ಎಂದು ಮಂಚ ಏರಿ ನಿಂತು ಫ್ಯಾನಿನ ಸ್ವಿಚ್ ಹಾಕಿ, 'ಈಗ ಗಾಳಿ ಬರ್ತಾ ಇದೆಯಾ ಅಜ್ಜಿ?' ಎಂದು ಕೇಳಿದ.

**ಬಾಗೂರು ಆರ್. ನಾಗರಾಜಪ್ಪ**



ಚಿತ್ರಗಳು: ಗಣೇಶ ಆಚಾರ್ಯ